## ಅಂದದ ಚಿತ್ರ ಪಕ್ಷಿ



ಚಿತ್ರ ಪಕ್ಷಿ ಗುಬ್ಬಚ್ಚಿ ಜಾತಿಯ ಅಂದವಾದ ಚಿಕ್ಕ ಹಕ್ಕಿ. ಇವು ಕಾಡು, ತೋಟಗಳಲ್ಲಿ ಕಂಡು ಬರುತ್ತವೆ. ಹೆಚ್ಚಾಗಿ ದಕ್ಷಿಣ ಏಷ್ಯಾದಲ್ಲಿ ಗೋಚರಿಸುತ್ತವೆ. ವೈಜ್ಞಾನಿಕವಾಗಿ ಪೆರಿಕ್ರೋಕೊಟಸ್ ಜಾತಿಗೆ ಸೇರಿವೆ. ಗಂಡು ಕಿತ್ತಳೆ ಕಡುಗೆಂಪು ಮತ್ತು ಕಪ್ಪು ಬಣ್ಣದಿಂದಿರುತ್ತದೆ. ಹೆಣ್ಣು ಬೂದು ಆಲಿವ್ ಹಳದಿ ಬಣ್ಣದಿಂದ ಕೂಡಿರುತ್ತದೆ. ಬಲವಾದ ಕಪ್ಪು ಕೊಕ್ಕು ಹಾಗೂ ದೀರ್ಘ ರೆಕ್ಕೆಗಳಿವೆ. ಗಾತ್ರ 20 ರಿಂದ 22 ಸೆಂ.ಮೀ. ನಷ್ಟಿರುತ್ತದೆ. ಇವು ಕೀಟಾಹಾರಿಗಳು. ಸಣ್ಣ ಸಣ್ಣ ಗುಂಪುಗಳಲ್ಲಿ ಕಂಡು ಬರುತ್ತವೆ.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು

## ಲಾಕ್ ಡೌನ್ ಚಿತ್ರ



ಕೊರೊನಾ ಎರಡನೇ ಅಲೆಯ ಲಾಕ್ ಡೌನ್ ವೇಳೆ ಬ್ಯಾಂಕಿನ ಕೆಲಸಕ್ಕೆ ತೆರಳುತ್ತಿದ್ದೆ. ರಸ್ತೆ ಪಕ್ಕದಲ್ಲಿ ಚಿತ್ರದಲ್ಲಿ ಇರುವ ದೃಶ್ಯವನ್ನು ನೋಡಿ ಮತ್ತೆ ಹಿಂದೆ ಬರುವಂತೆ ಮಾಡಿತು! ಲಾಕ್ ಡೌನಿಗೂ ಮೊದಲೇ ಅವರು ನಮ್ಮೂರಿನಲ್ಲಿದ್ದರು. ಊರೂರು ತಿರುಗಿ ತಾವೇ ತಯಾರಿಸಿದ ಪ್ಲಾಸ್ಟಿಕ್ ಬುಟ್ಟಿ, ಜೋಕಾಲಿ, ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದರು.

ಲಾಕ್‌ಡೌನಿನಿಂದಾಗಿ ಅವರು ತಮ್ಮೂರಿಗೆ ಹಿಂದಿರುಗಲು ಸಾರಿಗೆ ವ್ಯವಸ್ಥೆಯೂ ಇಲ್ಲ– ವ್ಯಾಪಾರವೈ ಇಲ್ಲ. ಅವರೇ ತಯಾರಿಸಿದ ಬುಟ್ಟಿಗಳು ಮಾರಾಟವಾಗದೇ ಎಲ್ಲವನ್ನೂ ಹೊದಿಕೆ ಮುಚ್ಚಿ ಲಾಕ್ ಮಾಡಲಾಗಿದೆ. ಅಲೆಮಾರಿಗಳ ಅವರ ಪ್ರೀತಿಗೆ ಊರನಾಯಿ ಸ್ನೇಹವನ್ನು ಬೆಸೆದುಕೊಂಡಿದೆ. ಇಂತಹವರು ಎಷ್ಟು ಮಂದಿ ಯಾವ ಯಾವ ಊರಿನಲ್ಲಿ ಲಾಕ್ ಆಗಿದ್ದರೋ?

—ಪೂರ್ಣಿಮಾ ಗುರುದೇವ್ ಭಂಡಾರ್ಕರ್, ಹೊಸನಗರ

## ಜಾಲರಿ ಹೂ

ಪ್ರಕೃತಿಯ ಚಿತ್ರ– ವಿಚಿತ್ರಗಳಿಗೆ ಈ ಕೇಸರಿ ಬಲೆಯ ಹೂವೂ ಸಾಕ್ಷಿಯಾಗುತ್ತದೆ. ಮಲೆನಾಡಿನ ಕಡೆ ಮುಂಗಾರಿನ ಎರಡು ಮೂರು ಹದ ಮಳೆ ಬಿದ್ದ ನಂತರ ಈ ತರಹದ ಸಸ್ಯಗಳು ಜನ್ಮತಾಳುತ್ತವೆ. ಇವುಗಳಲ್ಲಿ ಕೆಲವು ಅಣಬೆ ಜಾತಿಯ ಸಸ್ಯಗಳೂ ಇರುತ್ತವೆ. ನೋಡಲು ಆಕರ್ಷಕವಾಗಿರುತ್ತವೆ. ಕೆಲವು ಮೂರು ದಿನಗಳವರೆಗೆ ಬದುಕಿರುತ್ತವೆ. ನಾಯಿಕೊಡೆ ಜಾತಿಯ ಇಂತಹ ಹೂವುಗಳಲ್ಲಿ ಜಾಲರಿ ಅಥವಾ ಬಲೆ ರೀತಿ ಇರುವುದು ಅಪರೂಪ.

ಊರಿನ ಹಿರಿಯ ರೈತರನ್ನು ಇದರ ಬಗ್ಗೆ ಕೇಳಿದರೆ, 'ಇದುವರೆಗೂ ನಾವು ಈ ರೀತಿಯ ಜಾಲರಿ ರೂಪದ ಹೂ ನೋಡಿಲ್ಲಾ. ಇದು ಆಶ್ಚರ್ಯ ಮತ್ತು ಅಪರೂಪ' ಎಂದು ಹೇಳುತ್ತಾರೆ. ಮತ್ತೆ ಕೆಲ ಹಿರಿಯರು, ಇದು ಒಂದು ವಿಧದ ಸುವರ್ಣ ಗಡ್ಡೆಯ ಹೂ ಎಂದು ಹೇಳುತ್ತಾರೆ. ಇನ್ನೂ ಕೆಲ ರೈತರು ಇದು ನೂರು ವರ್ಷಕ್ಕೊಮ್ಮೆ ಅರಳುತ್ತದೆ. ಇದು ಅರಳಿದರೆ ಅದೃಷ್ಟ ಎಂದೂ ಅವರ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಇದರಲ್ಲಿ ಯಾವುದು ಸತ್ಯವೋ ತಿಳಿಯದು. ಆದರೆ ಜಾಲರಿ ರೀತಿಯ ಹೂ ಅರಳಿರುವದಂತೂ ಸತ್ಯ. ಯಾರೋ ಮಾಯಗಾರ ಮಾಡಿಟ್ಟಂತೆ ಕಾಣುವ ಇಂಥ ಅನೇಕ ಹೂವುಗಳು, ಪ್ರತಿ ವರ್ಷವೂ ಹುಟ್ಟಿ ಸಾಯಬಹುದು. ಅವುಗಳು ನಮ್ಮ ಕಣ್ಣಿಗೆ ಕಾಣದಿರಬಹುದಷ್ಟೆ.

—ಹೆಚ್.ಈ. ಅರುಣ್ ಕುಮಾರ್ ಹುರುಳಿ

